(12)

ಕರ್ನಾಟಕ ಸರ್ಕಾರ

ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ

ಕಲ್ಲು ಕಟ್ಟಡ, ಕಾಳಿದಾಸ ಮಾರ್ಗ, ಕೆ.ಜಿ.ರೋಡ್ ಜಂಕ್ಷನ್, ಬೆಂಗಳೂರು-09

ಸಂಖ್ಯೆ-KPRC-ADM20RBL/14/2023/KPRC-DD2-KPRC (996109) ದಿನಾಂಕ- 01.02.2023

## ಸುತ್ತೋಲೆ

**ವಿಷಯ : ರಾಜ್ಯದಾದ್ಯಂತ 09.02.2023 ರಂದು ಜೀತ ಪದ್ಧತಿ ನಿರ್ಮೂಲನಾ ದಿನಾಚರಣೆಯಂದು ಜೀತ ಪದ್ಧತಿ ನಿರ್ಮೂಲನೆ ಮತ್ತು ಜೀತವಿಮುಕ್ತರ ಪುನರ್ವಸತಿ ಕಾರ್ಯಕ್ರಮಗಳನ್ನು ನಡೆಸುವ ಕುರಿತು.**

**ಉಲ್ಲೇಖ : ಸರ್ಕಾರದ ಅಧಿಸೂಚನೆ ಸಂ- KPRC-ADM20RBL/13/2020/DD2, ಬೆಂಗಳೂರು, ದಿನಾಂಕ- 06.03.2021 ಹಾಗೂ ಕರ್ನಾಟಕ ಗೆಜೆಟ್ ದಿನಾಂಕ- 13.8.2021**

ಕರ್ನಾಟಕ ರಾಜ್ಯದಲ್ಲಿ ಅತೀ ಹೆಚ್ಚು ಜೀತಕಾರ್ಮಿಕ ಪದ್ಧತಿ ಪ್ರಕರಣಗಳು ಕಂಡುಬಂದಿರುವ ಹಿನ್ನೆಲೆಯಲ್ಲಿ ಪ್ರತೀ ವರ್ಷ February 9 ರಂದು ಜೀತ ಪದ್ಧತಿ ನಿರ್ಮೂಲನಾ ದಿನಾಚರಣೆಯನ್ನು ಆಚರಿಸಲು ಉಲ್ಲೇಖಿತ ಅಧಿಸೂಚನೆಯಲ್ಲಿ ಆಚರಣೆಯ ಎಲ್ಲಾ ಕ್ರಮ ಹಾಗೂ ವಿಧಾನಗಳನ್ನು ಸೂಚಿಸಲಾಗಿರುತ್ತದೆ. ವಿವರಿಸಲಾಗಿರುವಂತೆ ಜಿಲ್ಲಾ ಮಟ್ಟದಲ್ಲಿ ಜೀತ ನಿರ್ಮೂಲನಾ ದಿನಾಚರಣೆಯನ್ನು ಹಮ್ಮಿಕೊಳ್ಳುವಂತೆ ಸೂಚಿಸಲಾಗಿದೆ.

ಕೃಷಿ ವಲಯ, ಇಟ್ಟಿಗೆ ಕಾರ್ಖಾನೆ, ಕಲ್ಲು ಕ್ವಾರಿ, silk reeling, ಬೋರ್ ವೆಲ್ ಕೊರೆಯುವ ಘಟಕ, ಕಟ್ಟಡ ನಿರ್ಮಾಣ ಕ್ಷೇತ್ರ, ಆಹಾರ ಸಂಸ್ಕರಣಾ ಘಟಕ, ಮಾಂಸ ಮಾರಾಟ ಮಳಿಗೆಗಳು, ಹೊಟೇಲ್ ಸೇರಿದಂತೆ ಹಲವು ವಲಯಗಳಲ್ಲಿ ನಮ್ಮ ರಾಜ್ಯದ ಹಾಗೂ ಇತರೆ ರಾಜ್ಯಗಳ ಕಾರ್ಮಿಕರನ್ನು ಒತ್ತಾಯ ಪೂರ್ವಕವಾಗಿ ಅಂದರೆ ಜೀತಕ್ಕೆ ಇರಿಸಿಕೊಂಡು ಕೆಲಸ ಮಾಡಿಸಲಾಗುತ್ತಿದ್ದು, ಈ ಮೇಲಿನ ವಲಯಗಳಲ್ಲಿ ಕೆಲಸ ಮಾಡುತ್ತಿರುವ ಪೈಕಿ ವಲಸೆ ಕಾರ್ಮಿಕರ ಸಂಖ್ಯೆ ಅತೀ ಹೆಚ್ಚು ಕಂಡು ಬರುತ್ತಿದೆ.

ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯಿತಿಗಳು February 9 ರಂದು ಜಂಟಿಯಾಗಿ ಈ ಕೆಳಕಂಡ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸೂಚಿಸಿದೆ:

1. ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯಿತಿಗಳು ಜಂಟಿಯಾಗಿ ಜೀತವಿಮುಕ್ತರ ಪುನರ್ವಸತಿ ಶಿಭಿರವನ್ನು Febraury 9 ರಂದು ಹಮ್ಮಿಕೊಳ್ಳತಕ್ಕದ್ದು . ಶಿಭಿರದಲ್ಲಿ ನಿವೇಶನ ರಹಿತ ಜೀತವಿಮುಕ್ತರಿಗೆ ನಿವೇಶನ ಹಂಚಿಕೆ ಮಾಡಲು ಕ್ರಮವಹಿತಕ್ಕದ್ದು, ವಸತಿರಹಿತರ ಪಟ್ಟಿ ಮಾಡುವುದು, ಬ್ಯಾಂಕ್ ಖಾತೆ/ಆಧಾರ್/ಚುನಾವಣಾ ಗುರುತಿನ ಚೀಟಿ/ಪಡಿತರ ಚೀಟಿ/E shram/ ಆರೋಗ್ಯ ಚೀಟಿ/ ನರೇಗಾ ಚೀಟಿ ಇತ್ಯಾದಿ ದಾಖಲಾತಿಗಳನ್ನು ಹೊಂದಿಲ್ಲದ ಜೀತವಿಮುಕ್ತರಿಗೆ ಇವುಗಳನ್ನು ಶಿಭಿರದಲ್ಲಿ ನೀಡುವ ವ್ಯವಸ್ಥೆ ಮಾಡತಕ್ಕದ್ದು.

2. 18.5.2016 ರಿಂದ ಈ ತಹಲ್ ವರೆಗೂ ಬಿಡುಗಡೆಯಾಗಿರುವ ಜೀತ ಕಾರ್ಮಿಕರ ಬಿಡುಗಡೆ ಪ್ರಮಾಣ ಪತ್ರ, ಕಾರ್ಪಸ್ ನಿಧಿಯನ್ನು ಬಿಡುಗಡೆ ಮಾಡಿರುವ ವಿವರ, FIR ದಾಖಲು ಮಾಡಿರುವ ವಿವರ ಮತ್ತು ನ್ಯಾಯಾಲಯದಲ್ಲಿ ಸದರಿ ಪ್ರಕರಣ ಯಾವ ಹಂತದಲ್ಲಿದೆದೆ ಎಂಬ ಮಾಹಿತಿಯನ್ನು ಪ್ರಕರಣವಾರು, ವರ್ಷವಾರು , ಫಲಾನುಭವಿವಾರು Catalogue ಮಾಡಿ ಒಂದು ಪ್ರತಿಯನ್ನು February 9 ರಂದು ಜಿಲ್ಲಾಡಳಿತವು ಈ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡತಕ್ಕದ್ದು, ಅದರ ಒಂದು ಪ್ರತಿಯನ್ನು ಈ ಕಛೇರಿಗೆ ಕಳುಹಿಸತಕ್ಕದ್ದು.

3. ಜೀತವಿಮುಕ್ತರು ಸ್ವಾವಲಂಬಿಗಳಾಗದಿದ್ದಲ್ಲಿ ಪುನಃ ಜೀತಪದ್ಧತಿ ಸಿಲುಕುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯಿತಿಗಳು ಜೀತವಿಮುಕ್ತ ಮಹಿಳೆಯರ SHG ಗುಂಪುಗಳನ್ನು ರಚಿಸತಕ್ಕದ್ದು. ವಿಶೇಷವಾಗಿ ಮೈಸೂರು, ಮಂಡ್ಯ, ತುಮಕೂರು, ಚಿಕ್ಕಬಳ್ಳಾಪುರ , ರಾಮನಗರ ಈ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಕರಣಗಳು ದಾಖಲಾಗಿರುವುದರಿಂದ ಜಿಲ್ಲಾ ಪಂಚಾಯಿತಿಗಳು ಈ ಕುರಿತು ಕ್ರಮವಹಿಸತಕ್ಕದ್ದು. ಸ್ವಸಹಾಯ ಗುಂಪು ರಚಿಸಿ ಅವರುಗಳಿಗೆ ಸಾಲ ಸೌಲಭ್ಯವನ್ನು NRLM ವತಿಯಿಂದ ದೊರಕುವಂತೆ ಮಾರ್ಗದರ್ಶನ ನೀಡಿ ಜೀತವಿಮುಕ್ತರು ಪರಿಣಿತಿ ಹೊಂದಿರುವ ಕ್ಷೇತ್ರದಲ್ಲಿ SHGಗಳು ಸ್ವಯಂ ಉದ್ಯೋಗ ಮಾಡಲು ನೆರವು ನೀಡುವ ಕೆಲಸ ಮಾಡತಕ್ಕದ್ದು.

4. ಸರ್ಕಾರಿ ಸ್ವಾಮ್ಯದ ನಿಗಮ ಮಂಡಳಿಗಳು – ಅಂಬೇಡ್ಕರ್ ಅಭಿವೃದ್ಧಿ ನಿಗಮ, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ, ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳು ತಮ್ಮ ನಿಗಮ ಮಂಡಳಿಗಳಿಂದ ನೀಡುವ ಸೌಲಭ್ಯದ ಕುರಿತು ಶಿಬಿರದಲ್ಲಿ ಶಿಬಿರಾರ್ಥಿಗಳಿಗೆ ಮಾಹಿತಿ ನೀಡಿ ಅರ್ಜಿಗಳನ್ನು ಪಡೆದು ಸೌಲಭ್ಯ ವಿತರಿಸುವಂತೆ ಜಿಲ್ಲಾಧಿಕಾರಿಗಳು ಕ್ರಮವಹಿಸುವುದು.

5. ತಾಲ್ಲೂಕು ಹಂತದಲ್ಲಿ ಬಾಕಿ ಇರುವ ಎಲ್ಲಾ ಜೀತ ಕಾರ್ಮಿಕರ ಅರ್ಜಿಗಳನ್ನು Febraury 9 ರೊಳಗಾಗಿ ವಿಲೇಮಾಡಿ, ಅರ್ಹ ಜೀತ ಕಾರ್ಮಿಕರಿಗೆ Febraury 9 ರಂದು ಜೀತವಿಮುಕ್ತರ ಬಿಡುಗಡೆ ಪ್ರಮಾಣ ಪತ್ರ ಹಾಗೂ ಕಾರ್ಪಸ್ ನಿಧಿ ವಿತರಿಸುವುದು. ತಾಲ್ಲೂಕುವಾರು ವಿಲೇ ಮಾಡಿರುವ ಅರ್ಜಿಗಳ ಮಾಹಿತಿಯನ್ನು ಈ ಕಛೇರಿಗೆ ಕಳುಹಿಸತಕ್ಕದ್ದು. ವಿಲೇ ಮಾಡುವಾಗ ಕೇಂದ್ರ ಸರ್ಕಾರದ 18.5.2016ರ ಅನುಬಂಧ-1 ಪ್ರಕಾರ ತನಿಖೆ ಮಾಡಿ ವಿಲೇ ಮಾಡತಕ್ಕದ್ದು.

6. ಜಿಲ್ಲಾ ಪಂಚಾಯಿತಿಗಳು 18.5.2016 ರಿಂದ ಈ ತಹಲ್ ವರೆಗೂ ಬಿಡುಗಡೆಯಾಗಿರುವ ಜೀತಕಾರ್ಮಿಕರಿಗೆ ಮಾಸಾಶನ ನೀಡಿರುವ ವಿವರ ಹಾಗೂ ಅನುದಾನೇತರ ಪುನರ್ವಸತಿ ಸೌಲಭ್ಯಗಳಾದ- ವಸತಿ-ನಿವೇಶನ, ವಸತಿ, ಪಡಿತರ ಚೀಟಿ, ನರೇಗಾ ಕಾರ್ಡ್, ಕೌಶಲ್ಯ ತರಬೇತಿ, ಆರೋಗ್ಯ ಚೀಟಿ, E shram ಇತ್ಯಾದಿಗಳನ್ನು ನೀಡಿರುವ ವರ್ಷವಾರು ದಾಖಲಾತಿಯನ್ನು ಸಿದ್ಧಪಡಿಸುವುದು, ಯಶೋಗಾಥೆಗಳು ಇದ್ದಲ್ಲಿ ಅದನ್ನು ಸಹಾ ಕ್ರೋಢೀಕರಿಸಿ ಕಾರ್ಯಕ್ರಮದಲ್ಲಿ ದಾಖಲಾತಿ ಬಿಡುಗಡೆ ಮಾಡತಕ್ಕದ್ದು, ಅದರ ಒಂದು ಪ್ರತಿಯನ್ನು ಈ ಕಛೇರಿಗೆ ಕಳುಹಿಸತಕ್ಕದ್ದು.

7. Stake Holders (ಭಾಗಿದಾರ ಸಂಘ ಸಂಸ್ಥೆಗಳು) ಮುಖ್ಯವಾಗಿ ಅಸಂಘಟಿತ ಕಾರ್ಮಿಕರನ್ನು ಹೊಂದಿರುವ ಕಾರ್ಖಾನೆ/ಕೈಗಾರಿಕಾ ವಲಯಗಳಾದ ಇಟ್ಟಿಗೆ ಕಾರ್ಖಾನೆ , silk reeling, ಕಲ್ಲು ಕ್ವಾರಿ ಸಂಸ್ಥೆಗಳು, ಹೋಟೇಲ್ ಉದ್ಯಮ, ಇನ್ನಿತರೆ ಸಣ್ಣ ಗುಡಿ ಕೈಗಾರಿಕೆ ಹೊಂದಿರುವ ಮಾಲೀಕರ ಸಭೆ ಆಯೋಜಿಸಿ ಕಾರ್ಮಿಕ ಹಕ್ಕುಗಳ ಕುರಿತು, ಜೀತಕಾರ್ಮಿಕ ಪದ್ಧತಿ ಹಾಗೂ ಜೀತ ಅಪರಾಧಗಳಿಗೆ ಜೀತ ಪದ್ಧತಿ(ರದ್ಧತಿ) ಕಾಯ್ದೆ 1976 ರಡಿ ಉಲ್ಲೇಖಿಸಿರುವ ಶಿಕ್ಷೆಯ ಕುರಿತು ನುರಿತ ವಿಷಯ ತಜ್ಞರಿಂದ ಅರಿವು ಮೂಡಿಸುವ ಕಾರ್ಯಕ್ರಮವನ್ನು ಜೀತ ಪದ್ಧತಿ ನಿರ್ಮೂಲನೆ ದಿನಾಚರಣೆ ಆಚರಿಸಿದ ವಾರದಲ್ಲೇ ಹಮ್ಮಿಕೊಳ್ಳಲು ಎಲ್ಲಾ ಜಿಲ್ಲಾಡಳಿತಗಳು ಕ್ರಮವಹಿಸತಕ್ಕದ್ದು.

8. February 9 ರೊಳಗಾಗಿ ಎಲ್ಲಾ ಜಿಲ್ಲಾಧಿಕಾರಿಗಳು ಕಡ್ಡಾಯವಾಗಿ 2022-23 ನೇ ಸಾಲಿಗೆ ಬಿಡುಗಡೆಯಾಗಿರುವ ಜೀತವಿಮುಕ್ತರ ತುರ್ತು ಪರಿಹಾರ ಅನುದಾನ(ಕಾರ್ಪಸ್ ನಿಧಿ) ಯನ್ನು ಸೆಳೆದು , ಜಿಲ್ಲಾಧಿಕಾರಿಗಳ PD ಖಾತೆಗೆ ಜಮೆ ಮಾಡಲು ಕ್ರಮವಹಿಸತಕ್ಕದ್ದು.

9. ಜಿಲ್ಲಾವಾರು ಕಾರ್ಯಕ್ರಮದ ವರದಿಯನ್ನು ಮಾಹಿತಿ ಸಮೇತ ಈ ಕಛೇರಿಗೆ 20.02.2023 ರೊಳಗಾಗಿ ಕಳುಹಿಸಲು ಈ ಮೂಲಕ ತಿಳಿಸಿದೆ.

(ಪ್ರಿಯಾಂಕ ಮೇರಿ ಫ್ರಾನ್ಸಿಸ್)
ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ 02/02/23.

ಇವರಿಗೆ: ( ಮಾಹಿತಿ & ಸೂಕ್ತ ಕ್ರಮಕ್ಕಾಗಿ)

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಮೂಲಕ ಅಪರ ಜಿಲ್ಲಾಧಿಕಾರಿಗಳಿಗೆ ಹಾಗೂ ಉಪವಿಭಾಗಾಧಿಕಾರಿಗಳಿಗೆ ಹಾಗೂ ತಹಶಿಲ್ದಾರರುಗಳಿಗೆ.

2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯಕಾರ್ಯನಿರ್ವಹಕಾಧಿಕಾರಿಗಳ ಮೂಲಕ ಕಾರ್ಯಕ್ರಮದ ನೋಡಲ್ ಅಧಿಕಾರಿಗಳಿಗೆ , ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕಾಧಿಕಾರಿಗಳಿಗೆ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ .

ಪ್ರತಿ: (ಮಾಹಿತಿ ಹಾಗೂ ನಿರ್ದೇಶನಕ್ಕಾಗಿ)

1. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳಿಗೆ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, 3ನೇ ಹಂತ, 5ನೇ ಮಹಡಿ, ಬೆಂಗಳೂರು-1

2. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು(ಪಂ. ರಾಜ್), ಗ್ರಾಅಪಂ. ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳಿಗೆ , ಬಹುಮಹಡಿಗಳ ಕಟ್ಟಡ, 3ನೇ ಹಂತ, 3ನೇ ಮಹಡಿ, ಬೆಂಗಳೂರು-1

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳಿಗೆ , ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು -01

3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳಿಗೆ , ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ , ವಿಕಾಸ ಸೌಧ, 2ನೇ ಮಹಡಿ, ಕೊಠಡಿ ಸಂ-203, ಬೆಂಗಳೂರು-01

4. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ಇವರ ಆಪ್ತ ಶಾಖೆಗೆ.